# ಪ್ರಥಮ ಸೆಮಿಸ್ಟರ್ ಪರೀಕ್ಷೆ

**A**

ಅವಧಿ : 90 ನಿಮಿಷ | **VIII – ಗಣಿತ** | ಅಂಕಗಳು : 40

1. $\begin{array}{r} A\ 2 \\ \times\ B \\ \hline 360 \end{array}$ ಆದರೆ, $A$ & $B$ ಗಳ ಬೆಲೆಗಳು ಕ್ರಮವಾಗಿ . . . . . 1×7=7

   A) 5 , 6 B) 5 , 7 C) 7 , 5 D) 6 , 5

2. ಇವುಗಳಲ್ಲಿ 16 ರ ವರ್ಗಮೂಲದ ನಿಜವಾದ ಬೆಲೆಯನ್ನು ಸಾಂಕೇತಿಕವಾಗಿ ತಿಳಿಸುವ ಸರಿಯಾದ ವಿಧಾನ . . . . .

   A) $\sqrt{16} = 8$ B) $\sqrt{16} = \sqrt{4}$ C) $\sqrt{16} = -4$ D) $\sqrt{16} = 4$

3. $2p^2 + 3q + r$ ಇದು . . . . .

   A) ಏಕಪದ B) ದ್ವಿಪದ C) ತ್ರಿಪದ D) ಬಹುಪದ

4. $(a+b)(a-b) =$ . . . . .

   A) $a^2 + b^2 + 2ab$ B) $a^2 - b^2$ C) $a^2 + b^2 - 2ab$ D) $x^2 + (a+b)x + ab$

5. $x^2y^2$ ಮತ್ತು $x^3y^3$ ಗಳ ಸಾಮಾನ್ಯ ಅಪವರ್ತನ . . . . .

   A) $x^2y^2$ B) $x^3y^3$ C) $x^2y^3$ D) $x^3y^2$

6. $5p - 10$ ಇದನ್ನು ಅಪವರ್ತಿಸಿದಾಗ . . . . .

   A) $5p(p-2)$ B) $5(p-2)$ C) $5(p-10)$ D) $p(p-2)$

7. ಮೊತ್ತ $180^0$ ಇರುವ ಎರಡು ಕೋನಗಳನ್ನು . . . . . . ಕೋನಗಳು ಎನ್ನುತ್ತಾರೆ.

   A) ಪರಿಪೂರಕ B) ಪೂರಕ C) ಪಾರ್ಶ್ವ D) ಲಂಬ

8. ಅವಿಭಾಜ್ಯ ಸಂಖ್ಯೆಗಳೆಂದರೇನು? ಉದಾಹರಣೆ ಕೊಡಿ. 2×8=16

9. ಚಿತ್ರದಲ್ಲಿ $AB \parallel CD$ & $\angle AQR = 120^0$ ಆದರೆ, ಉಳಿದ ಕೋನಗಳನ್ನು ತಿಳಿಸಿ.




10. ಸೂತ್ರ ಬಳಸಿ ವಿಸ್ತರಿಸಿ : $(4m+3)^2$

11. ಸ್ವಯಂಸಿದ್ಧ ಎಂದರೇನು? ಯಾವುದಾದರೊಂದು ಸ್ವಯಂಸಿದ್ಧವನ್ನು ಬರೆಯಿರಿ.

12. 1 ರಿಂದ 17 ರ ವರೆಗಿನ ಎಲ್ಲಾ ಬೆಸ ಸಂಖ್ಯೆಗಳನ್ನು ಬಳಸಿಕೊಂಡು 3×3 ರ ಮಾಯಾ ಚೌಕ ರಚಿಸಿ.

13. ಚಿತ್ರದಲ್ಲಿ $\angle ABQ = 115^0$ & $\angle ACR = 125^0$ ಆದರೆ, $\Delta ABC$ ಯ ಕೋನಗಳನ್ನು ಕಂಡುಹಿಡಿಯಿರಿ.




14. ಅಪವರ್ತಿಸಿ : $x^2 - 7x + 12$

15. ಅಪವರ್ತನ ವಿಧಾನದಲ್ಲಿ 1728 ರ ಘನಮೂಲ ಲೆಕ್ಕಿಸಿ.

16. 2025 ಚ.ಮೀ. ವಿಸ್ತೀರ್ಣವುಳ್ಳ ಚೌಕಾಕಾರದ ಹೊಲದ ಪ್ರತಿ ಬದಿಯ ಉದ್ದ ಕಂಡುಹಿಡಿಯಿರಿ. 3×3=9

17. ಒಂದು ಆಯತದ ಉದ್ದ ಮತ್ತು ಅಗಲಗಳು ಕ್ರಮವಾಗಿ $(x^2 - 3x + 2)$ ಮತ್ತು $(x^2 + 2x - 1)$ ಮಾನಗಳಾಗಿದ್ದರೆ, ಅದರ ಸುತ್ತಳತೆ ಕಂಡುಹಿಡಿಯಿರಿ.

18. ನಾಲ್ಕರ ವಿಭಾಜ್ಯತೆಯ ನಿಯಮಗಳನ್ನು ತಿಳಿಸಿ ಮತ್ತು ಉದಾಹರಣೆ ಕೊಡಿ.

19. 'ಒಂದು ತ್ರಿಕೋನದ ಮೂರು ಕೋನಗಳ ಮೊತ್ತ $180^0$ ಇರುತ್ತದೆ' ಈ ಪ್ರಮೇಯ ಸಾಧಿಸಿ. 4×2=8

20. ಈ ಕೆಳಗಿನವುಗಳನ್ನು ತೋರಿಸುವ ಚಿತ್ರ ಬಿಡಿಸಿ :

   i) $\angle ABC = 70^0$ ii) ಸರಳಯುಗ್ಮ ಕೋನಗಳು

   iii) ಶೃಂಗಾಭಿಮುಖ ಕೋನಗಳು iv) ಸರಳರೇಖಾಗತವಲ್ಲದ 3 ಬಿಂದುಗಳು.

* * * * *